ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು,

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಉತ್ತರಗಳನ್ನು ಸಭೆಯ ಮುಂದಿರಿಸಲಾಗಿದೆ.

ಭದ್ರ ಜಲಾಶಯದ ಯೋಜನೆ ಮೇರೆಗೆ ತೋಟಗಾರಿಕೆ ಅಭಿವೃದ್ಧಿ.

೧೩೮೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಜಲಾಶಯದ ಯೋಜನೆ, ತೋಟಗಾರಿಕೆ ಇಲಾಖೆಯ ಅಭಿವೃದ್ಧಿಗಾಗಿ ಎಷ್ಟು ಹಣ ಮಂಜೂರಾಗಿದೆ ?

ಆ) ೧೯೮೫-೮೬ ರಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳೇನು ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಇಲ್ಲಿಯವರೆಗೆ ಹಣ ಮಂಜೂರಾಗಿಲ್ಲ.

ಆ) ಹಣ ಮಂಜೂರಾಗದ ಕಾರಣ ಯಾವ ಕಾರ್ಯಕ್ರಮಗಳನ್ನು ೧೯೮೫-೮೬ ರಲ್ಲಿ ಕೈಗೊಳ್ಳಲಾಗಿಲ್ಲ.

ಕುಂದಾಪುರ ತಾಲ್ಲೂಕಿನ ಹೊನಂಗಡಿ ಪ್ರಾಥಮಿಕ ಶಾಲೆ ಶಿಕ್ಷಕರ ನೇಮಕಾತಿ ಕುರಿತು.

೧೩೯೦. ಶ್ರೀ ಕೆ. ಪ್ರತಾಪಚಂದ್ರ (ಕುಂದಾಪುರ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕು ಹೊನಂಗಡಿ ಗ್ರಾಮದ ಕರ್ನಾಟಕ ವಿದ್ಯುತ್ ನಿಗಮದ ವಸಾಹತಿನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಆ) ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು ? ಹಾಗೂ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ)

ವಿದ್ಯಾರ್ಥಿಗಳು	...	೨೭೭
ವಿದ್ಯಾರ್ಥಿನಿಯರು	...	೧೬೬
ಒಟ್ಟು		೪೪೩

ಆ) ಮಂಜೂರಾದ ಅಧ್ಯಾಪಕರ ಸಂಖ್ಯೆ ... ೬
ಕೊರತೆ ಇರುವ ಅಧ್ಯಾಪಕರ ಸಂಖ್ಯೆ ... ೩

ಜೀತ ವಿಮುಕ್ತರ ಪುನರ್ವಸತಿ ಬಗ್ಗೆ.

೫೯೦. ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜೀತವಿಮುಕ್ತರ ಹೊಸ ಬಾಳ್ವೆಗಾಗಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ? (ಯೋಜನೆಗಳ ವಿವರಗಳನ್ನು ನೀಡುವುದು)

ಆ) ಈ ಯೋಜನೆ ಅನುಸಾರ ಕಾರ್ಯಗತವಾಗಿರುವ ಕಾರ್ಯಗಳಾವುವು ?

ಇ) ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಜನ ಜೀತವಿಮುಕ್ತರನ್ನು ಗುರುತಿಸಲಾಗಿದೆ ಮತ್ತು ಈ ದಿಶೆಯಲ್ಲಿ ಅವರ ಪುನರ್ವಸತಿಗೆ ಯಾವ ಯೋಜನೆ ಕೈಗೊಳ್ಳಲಾಗಿದೆ ?

ಈ) ಬೆಂಗಳೂರು ಜಿಲ್ಲೆ ಯಲಹಂಕ ಹೋಬಳಿ ಸಂಪಿಗೆ ಹಳ್ಳಿಯಲ್ಲಿ ಈ ಯೋಜನೆ ಕಾರ್ಯ ರೂಪಕ್ಕೆ ಒಂದಿದೆಯೇ ?

ಉ) ಈ ಪುನರ್ವಸತಿ ಕಾರ್ಯದಲ್ಲಿ ಎಷ್ಟು ಜನರಿಗೆ ಲಾಭವಾಗಿದೆ, ಅಲ್ಲಿನ ನಿವಾಸಿಗಳು ತಮ್ಮ ಕಂದು ಕೊರತೆಗಳ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜೀತ ವಿಮುಕ್ತರ ಪುನರ್ವಸತಿಗಾಗಿ ಭೂಮಿ ಆಧಾರಿತ ಮತ್ತು ಭೂಮಿ ಆಧಾರಿತವಲ್ಲದ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಭೂ ಆಧಾರಿತ ಕಾರ್ಯಕ್ರಮಗಳಲ್ಲಿ ಜಿಲ್ಲೆಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಭೂಮಿಯನ್ನು ಈ ಬಿಡುಗಡೆ ಹೊಂದಿದ ಜೀತದಾಳುಗಳಿಗೆ ಮಂಜೂರು ಮಾಡಲಾಗುವುದು.

ಭೂ ಆಧಾರಿತವಲ್ಲದ ಕಾರ್ಯಕ್ರಮಗಳಲ್ಲಿ ತಲಾ ೦೦೦ ರೂಪಾಯಿಗಳ ಈ ಕೆಳಕಂಡ ಯಾವು ದಾದರೂ ಒಂದು ಕಾರ್ಯಕ್ರಮದಡಿ ಆರ್ಥಿಕ ಸ್ವತ್ತುಗಳನ್ನು ಕೊಡಿಸುವುದಾಗಲೀ ಅಥವಾ ಈ ಕಾರ್ಯ ಕ್ರಮಗಳಿಗೆ ಬೇಕಾದ ಉಪಕರಣ ವಗೈರೆ ಕೊಡಲಾಗುವುದು. ಏನೇ ಆದರೂ ಈ ೪೦೦೦ ರೂಪಾಯಿ ಗಳನ್ನು ಹಣದ ರೂಪದಲ್ಲಿ ಕೊಡದೆ ಆರ್ಥಿಕ ಸ್ವತ್ತುಗಳ ರೂಪದಲ್ಲಿ ಫಲಾನುಭವಿಗಳಿಗೆ ನೀಡ ಲಾಗುವುದು.

೧ ಎತ್ತಿನ ಜೋಡಿಗಳು
೨ ಎತ್ತಿನ ಜೋಡಿ ಮತ್ತು ಬಂಡಿ
೩ ಹಾಲು ಕರೆಯುವ ಎಮ್ಮೆಗಳು
೪ ಮೇಕೆಗಳು
೫ ಕುರಿಗಳು
೬ ಹಂದಿಗಳು
೭ ನೇಗಿಲು ಬೀಜ, ಗೊಬ್ಬರಗಳು
೮ ಸೈಕಲ್ ಅಂಗಡಿ
೯ ಊದುಬತ್ತಿ ಮಾಡುವುದು
೧೦ ಚಾಪೆ ಹೆಣೆಯುವುದು
೧೧ ರೇಷ್ಮೆ ಸುತ್ತುವುದು
೧೨ ಸಣ್ಣ ಅಂಗಡಿ
೧೩ ಕಮ್ಮಾರಿಕೆ
೧೪ ಬಡಿಗೆತನ
೧೫ ಬ್ಯಾಂಡ್ ಸೆಟ್ಟು (ಬಜಂತ್ರಿ ಸಟ್ಟು)
೧೬ ಚರ್ಮದ ಕೆಲಸ
೧೭ ಇಟ್ಟಿಗೆ ತಯಾರಿಸುವುದು ವಗೈರೆ.

ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಪೂರಕವಾಗಿ ಫಲಾನುಭವಿಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಂತ್ಯೋದಯ ಕಾರ್ಯಕ್ರಮಗಳಲ್ಲಿ ಬ್ಯಾಂಕ್ ಸಾಲವನ್ನು ಮಂಜೂರು ಮಾಡಿಸಿ

ಕೊಡುವುದಲ್ಲದೆ ಮನೆದಳ ಇಲ್ಲದವರಿಗೆ ಮನೆದಳ (ಹೌಸ್ ಸೈಟ್) ಮತ್ತು ಜನತಾ ಮನೆಗಳನ್ನು ಮಂಜೂರು ಮಾಡಲಾಗುವುದು.

ಆ) ಮೇಲಿನಂತೆ.

ಇ) ಬೆಳಗಾವಿ ಜಿಲ್ಲೆಯಲ್ಲಿ ೧೯ ಜನ ಜೀತ ವಿಮುಕ್ತರನ್ನು ಗುರುತಿಸಲಾಗಿದೆ. ಅದರಲ್ಲಿ ೧೦ ಜನರಿಗೆ ಪುನರ್ವಸತಿ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಈ ಜನರಿಗೆ ಭೂಮಿ ಮಂಜೂರು ಮಾಡುವ ದೊಂದಿಗೆ ೪೦೦೦ ರೂಪಾಯಿಗಳ ಹಾಲು ಕರೆಯುವ ಹಸುಗಳನ್ನು ಕೃಷಿ ಉಪಕರಣಗಳನ್ನು ಬೀಜ ಮತ್ತು ಗೊಬ್ಬರಗಳನ್ನು ಕೊಡಲಾಗಿದೆ, ಇದನ್ನು ಸಪದತ್ತಿ, ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ ಅನುಷ್ಠಾನ ಗೊಳಿಸಲಾಗಿದೆ. ಉಳಿದ ೯ ಜನಗಳ ವಿವರಕ್ಕೆ ಹೀಗಿದೆ. ನಾಲ್ಕು ಜನ ಎಲ್ಲಿದ್ದಾರೆ ಗೊತ್ತಿಲ್ಲ, ಇಬ್ಬರೂ ಜಿಲ್ಲೆ ಬಿಟ್ಟು ಹೋಗಿದ್ದಾರೆ ಒಬ್ಬರು ತೀರಿಕೊಂಡಿದ್ದಾಕೆ. ಇಬ್ಬರು ಹಂಚಿನಾಳಕ್ಕೆ ಪುನರ್ವಸತಿಗೆ ಬರಲು ತಯಾರಿಲ್ಲ.

ಈ) ಹೌದು, ಬಂದಿದೆ. ಹತ್ತು ಜನ ಜೀತ ವಿಮುಕ್ತರನ್ನು ಪುನರ್ವಸತಿ ಗೊಳಿಸಲಾಗಿದೆ. ಈ ಬಗ್ಗೆ ಒಂದು ಪೂರಕ ಟಿಪ್ಪಣಿಯನ್ನು ಲಗತ್ತಿಸಲಾಗಿದೆ.

ಉ) ಇಲ್ಲಿಯವರೆಗೆ ೩೩,೪೮೧ ಜೀತ ವಿಮುಕ್ತರನ್ನು ಪುನರ್ವಸತಿ ಗೊಳಿಸಲಾಗಿದೆ. ಈ ಪುನರ್ವಸತಿಗೊಂಡ ಜೀತ ವಿಮುಕ್ತರಿಗೆ ಹಾಲಿ ಕೊಡಂತ್ತಿರುವ ೪೦೦೦ ರೂಪಾಯಿಗಳು ಬಹಳ ಕಮ್ಮಿ. ಈ ಹಣವನ್ನು ಹೆಚ್ಚು ಗೊಳಿಸಲು ಬೇಡುತ್ತಿದ್ದಾರೆ.

ಅಮ್ಮಣಗಿ ಗ್ರಾಮದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗೆ ಪ್ರೌಢಶಾಲೆ ಮಂಜೂರು ಮಾಡಿದ ಬಗ್ಗೆ.

೮೬೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಮ್ಮಣಗಿ, ತಾಲ್ಲೂಕು ಹುಕ್ಕೇರಿ ಗ್ರಾಮದಲ್ಲಿ ಮೊದಲಬೆ ಪ್ರೌಢಶಾಲೆಯನ್ನು ಯಾವ ಖಾಸಗಿ ಸಂಸ್ಥೆಗೆ ಮಂಜೂರು ಮಾಡಲಾಗಿತ್ತು ?

ಆ) ಮಂಜೂರಾದ ಪ್ರೌಢಶಾಲೆಯನ್ನು ರದ್ದು ಪಡಿಸಿ ಬೇರೆ ಖಾಸಗಿ ಸಂಸ್ಥೆಗೆ ಮಂಜೂರು ಮಾಡಿರುವುದು ನಿಜವೆ ?

ಇ) ಈಗಾಗಲೇ ಮಂಜೂರು ಮಾಡಿರುವ ಸಂಸ್ಥೆಯ ಹೆಸರೇನು ಹಾಗೂ ಮಂಜೂರು ಮಾಡಿದ ದಿನಾಂಕ ಯಾವುದು ?

ಈ) ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡುವ ಬಗ್ಗೆ ಗ್ರಾಮಸ್ಥರು ನೀಡಿರುವ ನಿಧಿ ಹಾಗೂ ಜಮೀನಿನ ವಿವರವೇನು ?

ಉ) ಕಳೆದ ಅಧಿವೇಶನದಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿದರೂ ಸಹ ಅದನ್ನು ಸಂಸ್ಥೆಗೆ ಮಂಜೂರ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಮೈನಾರಿಟೀಸ್ ಸೋಷಿಯಲ್ ವೆಲ್‌ಫೇರ್ ಎಜುಕೇಷನ್ ಸೊಸೈಟಿ ಅವರಿಗೆ ಮಂಜೂರು ಮಾಡಲಾಗಿತ್ತು.

ಆ) ನಿಜ.

ಇ) ಎಸ್. ಜಿ. ಡಿ. ಪ್ರೌಢಶಾಲೆ, ನಿಡಸೋಸಿ, ಇವರ ಕನ್ನಡ ಮಾಧ್ಯಮದ ೮, ೯, ೧೦ ನೇ ತರಗತಿಯ ಒಂದೊಂದು ಶಾಖೆಯನ್ನು ಅಮ್ಮಣಗಿಗೆ ಸ್ಥಳಾಂತರ ಮಾಡಿದ ದಿನಾಂಕ ೩೧-೧೨-೧೯೮೫

ಈ) ಇದುವರೆಗೆ ಯಾವುದೇ ನಿಧಿ, ಜಮೀನು ನೀಡಿಲ್ಲ.

ಉ) ೧೯೮೬-೮೭ನೇ ಸಾಲಿಗೆ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಬಾರದೆಂದು ಸರ್ಕಾರ ತೀರ್ಮಾನ ಕೈಗೊಂಡಿದೆ.